Srinivas Institute of Te...
Library, Mangalore

**CBCS SCHEME**

17KKM39/49

USN | | | | | | | | | | |

Question Paper Version : A

## Third/Fourth Semester B.E. Degree Examination, Feb./Mar. 2022
# ಕನ್ನಡ ಮನಸು
## (COMMON TO ALL BRANCHES)

Time: 2 hrs.] [Max. Marks: 30

### ಸೂಚನೆಗಳು

1. ಎಲ್ಲ ೩೦ ಪ್ರಶ್ನೆಗಳಿಗೂ ಉತ್ತರಿಸಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ.
2. ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ಯು.ಎಸ್.ಎನ್ ಸಂಖ್ಯೆ ಹಾಗೂ ಪಶ್ನೆ ಪತ್ರಿಕೆಯ ಶ್ರೇಣಿಯನ್ನು ಅಂದರೆ A, B, C ಅಥವಾ D ಯನ್ನು ತಪ್ಪಿಲ್ಲದಂತೆ ಕಡ್ಡಾಯವಾಗಿ ಗುರುತಿಸುವುದು ಅಭ್ಯರ್ಥಿಯ ಜವಾಬ್ದಾರಿಯಾಗಿರುತ್ತದೆ.
3. ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ನಿಗದಿಪಡಿಸಿರುವ ಸ್ಥಳದಲ್ಲಿ ಭರ್ತಿಮಾಡದೆ ಹಾಗೆಯೇ ಬಿಟ್ಟಲ್ಲಿ ಅಥವಾ ಭರ್ತಿಮಾಡಿದ ಮಾಹಿತಿಯಲ್ಲಿ ಯಾವುದೇ ವ್ಯತ್ಯಾಸವಿದ್ದಲ್ಲಿ ಅಂತಹ ಉತ್ತರ ಪತ್ರಿಕೆಗಳನ್ನು ರದ್ದು ಪಡಿಸಲಾಗುವುದು.
4. ಕೇವಲ ಒಂದು ಉತ್ತರವನ್ನು ಮಾತ್ರ ಉತ್ತರ ಪತ್ರಿಕೆಯಲ್ಲಿ ಗುರುತಿಸತಕ್ಕದ್ದು. ಒಂದೆ ಪ್ರಶ್ನೆಗೆ ಎರಡು ಉತ್ತರವನ್ನು ಗುರುತಿಸುವುದು ಅಮಾನ್ಯ.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾದ ಓ.ಎಂ.ಆರ್ ಉತ್ತರ ಪತ್ರಿಕೆಯ ಹಾಳೆಯ ಮೇಲೆ ಕಪ್ಪು ಅಥವಾ ನೀಲಿ ಶಾಹಿಯ ಬಾಲ್‌ಪಾಯಿಂಟ್ ಪೆನ್ನಿನಿಂದ ಗುರುತು ಮಾಡಬೇಕು.

---

1. ಚಿತ್ರಗಳ ಮೂಲಕ ಅಭಿಪ್ರಾಯಗಳನ್ನು ನಿರೂಪಿಸುವ ಘಟ್ಟವೇ ಬರಹದ ಇತಿಹಾಸದಲ್ಲಿ ಮೊದಲ ಹಂತ. ಇದನ್ನು ---------- ಎಂದು ಕರೆಯಬಹುದು.

   ಅ) ಅಕ್ಷರ ಲೇಖನ ಬ) ಚಿತ್ರ ಲೇಖನ (ಪಿಕ್ಟೋಗ್ರಫಿ) ಕ) ಶಿಲಾಶಾಸನ ಡ) ಮುದ್ರಾ ಲೇಖನ

2. ಮೈಸೂರು ರಾಜ್ಯವನ್ನು _____ ಇಸವಿಯಲ್ಲಿ ಕರ್ನಾಟಕ ರಾಜ್ಯವೆಂದು ನಾಮಕರಣ ಮಾಡಲಾಯಿತು.

   ಅ) 1971 ಬ) 1973 ಕ) 1974 ಡ) 1975

3. ಕವಿಯ ಕಣ್ಣಿಗೆ ಬೆಟ್ಟಗಳು ಕುತನಿಯ (ಹತ್ತಿಯ) ಅಂಗಿಯನ್ನು ತೊಟ್ಟು -------- ಗೆ ಹೊರಡಲು ಸಿದ್ಧವಾಗಿರುವಂತೆ ಕಾಣಿಸುತ್ತಿವೆ ಎಂದು ವರ್ಣಿಸಿದ್ದಾರೆ.

   ಅ) ತೇರಿಗೆ ಬ) ಮೆರವಣಿಗೆ ಕ) ಕಾಡಿಗೆ ಡ) ಜಾತ್ರೆಗೆ

4. ಬಿ. ಜಿ. ಎಲ್ ಸ್ವಾಮಿಯವರ ಆನೆಹಳ್ಳದಲ್ಲಿ ಹುಡುಗಿಯರು ಎನ್ನುವುದು -------------ಲೇಖನ ವಿಷಯವಾಗಿದೆ.

   ಅ) ಕವನ ಬ) ವಿಜ್ಞಾನ ಲೇಖನ ಕ) ಪ್ರವಾಸಕಥನ ಡ) ವಿಮರ್ಶೆ

5. 'ಬೆಡ್ ನಂಬರ್ ಏಳು' ಎನ್ನುವ ಕತೆಯಲ್ಲಿರುವ ಆಸ್ಪತ್ರೆ ಯಾವ ಕಾಯಿಲೆ ಚಿಕಿತ್ಸೆಯ ಆಸ್ಪತ್ರೆಯಾಗಿದೆ.

   ಅ) ಹೃದಯರೋಗ ಬ) ಜಠರಕಾಯಿಲೆ ಕ) ಮಾನಸಿಕ ಕಾಯಿಲೆ ಡ) ಕ್ಷಯ ರೋಗ

6. ಪಿ. ಲಂಕೇಶ್ ರವರು ಬರೆದಿರುವ ಕವನ ಎಂದರೆ ---------.
   ಅ) ಹೆಂಚಿನ ಮನೆ ಬ) ಗುಬ್ಬಚ್ಚಿಯ ಗೂಡು ಕ) ಪದ್ಯ ಡ) ಸಾನೆಟ್

7. ಮನುಷ್ಯ ತನ್ನ ----- ದೌರ್ಬಲ್ಯದಿಂದಾಗಿಯೇ ಒಟ್ಟಾಗಿ ಬಾಳುವುದನ್ನು ಕಲಿತವನು - ಪಿ. ಲಂಕೇಶ
   ಅ) ದೇಹರಚನೆಯ ಬ) ಬಾಷೆಯ ಕ) ಸಿಟ್ಟಿನ ಡ) ಅಸುರಕ್ಷತೆಯ

8. ಡಾ. ಪೂರ್ಣಚಂದ್ರ ತೇಜಸ್ವಿಯವರ 'ಬೇಂಕ್ರ ಮೇಸ್ತ್ರಿ ಮತ್ತು ಅರಿಸ್ಟಾಟಲ್' ಎನ್ನುವ ಬರವಣಿಗೆಯ --------- ಲೇಖನವಾಗಿದೆ.
   ಅ) ಪರಿಸರ ಬ) ವಿಮರ್ಶೆ ಕ) ಪ್ರವಾಸ ಡ) ನಾಟಕ

9. ಮೂಡಣ - ವಿರುದ್ಧಾರ್ಥಕ ಪದವನ್ನು ಗುರುತಿಸಿ.
   ಅ) ತೆಂಕಣ ಬ) ಕುಣಿಗಲ್ ಕ) ಬಡಗಲ ಡ) ಪಡುವಣ

10. ಗುಂಪಿಗೆ ಸೇರದ ಹೆಸರನ್ನು ಗುರುತಿಸಿ
   ಅ) ದ.ರಾ. ಬೇಂದ್ರೆ ಬ) ಯು, ಆರ್. ಅನಂತ ಮೂರ್ತಿ
   ಕ) ಡಾ. ಚಂದ್ರಶೇಖರ ಕಂಬಾರ ಡ) ಡಾ. ಎಂ. ಚಿದಾನಂದ ಮೂರ್ತಿ

11. ಡಾ. ಶಿವರಾಮ ಕಾರಂತರ -------- ಕೃತಿಗೆ ಜ್ಞಾನಪೀಠ ಪ್ರಶಸ್ತಿಯನ್ನು ನೀಡಲಾಗಿದೆ.
   ಅ) ಚೋಮನ ಗುಡಿ ಬ) ಬೆಟ್ಟದ ಜೀವ ಕ) ಮರಳಿಮಣ್ಣಿಗೆ ಡ) ಮೂಕಜ್ಜಿಯ ಕನಸುಗಳು

12. ಬೆಣ್ಣೆಹಚ್ಚು ಎನ್ನುವುದರ ಅರ್ಥ
   ಅ) ಹೊಗಳುವುದು ಬ) ಕರೆಯುವುದು ಕ) ಕಟ್ಟುವುದು ಡ) ಮಾತನಾಡಿಸುವುದು

13. ಗಾಂಧಿ ಕತೆಯಲ್ಲಿ ಗಾಂಧಿ ಹೇಳುವ 'ನಾನು ಸತ್ತರೆ ನನ್ನ ಅಲಸಿನ ಮರದ ಬುಡದಲ್ಲೆ ಹಾಕು' ಅಲಸಿನ ಮರ ಯಾರಿಗೆ ಸೇರಿದ್ದಾಗಿದೆ.
   ಅ) ತಾತ ಕರಿಸಿದ್ದೇಗೌಡನದ್ದು ಬ) ಗಾಂಧಿಯ ತಂದೆಯದ್ದು
   ಕ) ತಾಯಿ ನಿಂಗವ್ವಳದ್ದು ಡ) ಗಾಂಧಿ ಬೆಳಸಿದ ಮರ

14. ಇವರು ಕನ್ನಡದಲ್ಲಿ ಮೊದಲು ನಿಘಂಟನ್ನು ತಯಾರು ಮಾಡಿದವರು ಎನ್ನುವ ಕೀರ್ತಿಗೆ ಪಾತ್ರರಾದವರು.
   ಅ) ಕಿಟೆಲ್ ಬ) ಕುವೆಂಪು ಕ) ಡಿ.ವಿ.ಗುಂಡಪ್ಪ ಡ) ಶಿವರಾಮ ಕಾರಂತ

15. ಹಿಂದುಳಿದ ವರ್ಗಗಳಿಗೆ ಸರ್ಕಾರಿ ಕೆಲಸಗಳಲ್ಲಿ ಮೀಸಲಾತಿಗಾಗಿ ಮೈಸೂರಿನ ----------- ಒಡೆಯರ್ ರವರು ಮಿಲ್ಲರ್ ಆಯೋಗವನ್ನು ನೇಮಿಸಿದರು.
   ಅ) ಜಯಚಾಮರಾಜರು ಬ) ವಿಶ್ವೇಶ್ವರಯ್ಯನವರು
   ಕ) ಇಮ್ಮಡಿ ಚಾಮರಾಜರು ಡ) ನಾಲ್ವಡಿ ಕೃಷ್ಣರಾಜ

Srinivas Institute of Technolog
Library, Mangalore



16. ಸಿದ್ದಲಿಂಗಯ್ಯನವರ ಬಿಲ್ಚಿಯ ಹಾಡು ಕವನದಲ್ಲಿ ಬರುವ ಬಿಲ್ಚಿ ಎನ್ನುವುದು ------------.
ಅ) ಬಿಹಾರದ ಗ್ರಾಮದ ಹೆಸರು ಬ) ಬೆಲ್ಜಿಯಂ ನಗರ
ಕ) ತೋಟದ ಬೇಲಿ ಡ) ಯಾವುದು ಅಲ್ಲ

17. ಕರ್ನಾಟಕ ಸಂಸ್ಕೃತಿಯ ಒಂದು ಚಿತ್ರಣದ ಲೇಖಕರು.
ಅ) ಶಿವರಾಮ ಕಾರಂತ ಬ) ರಹಮತ್ ತರೀಕೆರೆ ಕ) ಕೆ. ಸದಾಶಿವ ಡ) ಕುವೆಂಪು.

18. ರೊಟ್ಟಿ ಮತ್ತು ಕೋವಿ ಎನ್ನುವುದು ಸು.ರಾ. ಎಕ್ಕುಂಡಿಯವರು ಬರೆದ ---------- ಆಗಿದೆ.
ಅ) ಸಣ್ಣಕತೆ ಬ) ಪ್ರವಾಸ ಕಥನ ಕ) ಅಂಕಣಬರಹ ಡ) ಕವನ.

19. ವಶಿಷ್ಠ ಮುನಿ ತನ್ನಲ್ಲಿದ್ದ ನಂದಿನಿಧೇನುವನ್ನು ಕೊಡಲಿಲ್ಲವೆಂದು ---------ನು ಹಸುವಿಗಿಂತ ಹೆಚ್ಚು ಹಾಲುಕೊಡುವ ಎಮ್ಮೆಯನ್ನು ಸೃಷ್ಠಿಸಿದನು.
ಅ) ಸೋಮದೇವ ಬ) ವಿಶ್ವಾಮಿತ್ರ ಕ) ನರ್ಕ್‌ಷತ್ರಿಕ ಡ) ಶಂಕರಾಚಾರ್ಯ.

20. 'ಇನ್ನೊಂದದೆ ಕೆರೆ ಕಟ್ಟಿ ಒಂದ್ ಮಾಡೊ ರೋಣಿ ಮಳೆ' ಅದೂ ಕದ್ರೆ ಜನಾ ದನಾ ಎಲ್ಲಾ ಊರು ಕೇರಿ ಬುಡದೇ' ಈ ಸಂಭಾಷಣೆ ಯಾವ ಲೇಕಖರು ತಮ್ಮ ಬರವಣೆಯಲ್ಲಿ ಮೂಡಿಸಿದ್ದಾರೆ.
ಅ) ಯು. ಆರ್ ಅನಂತಮೂರ್ತಿ ಬ) ಶ್ರೀನಿವಾಸ
ಕ) ಬಸವರಾಜ ಕುಕ್ಕರಹಳ್ಳಿ ಡ) ಸಿದ್ದಲಿಂಗಯ್ಯ.

21. ಗೇರು ಸೊಪ್ಪೆ ಆಜುಬಾಜಿನ ಊರಿನ ಜನರು ಜೋಗಿನ ಜಲಪಾತವನ್ನು ---------- ಎಂದು ಕರೆಯುತ್ತಾರೆ.
ಅ) ಗೊರೂರು ಬ) ಜುಳು ಜುಳು ಕ) ಧಬೆ ಧಬೆ ಡ) ಜಲಧಾರೆ

22. ಸರ್ ಎಂ. ವಿಶ್ವೇಶ್ವರಯ್ಯನವರು ದುಡಿದವನಿಗೆ ತಕ್ಕ ಪ್ರತಿಫಲ ಸಿಗಲೇಬೇಕು ಎಂದು ತಮ್ಮ ಕೆಲಸಕ್ಕೆ ಶುಲ್ಕವನ್ನು ಪಡೆಯುವಂತೆ -------- ರನ್ನು ಒತ್ತಾಯಿಸಿ ಚೆಕ್ಕನ್ನು ನೀಡಿದರು.
ಅ) ಕಾರ್ಮಿಕನನ್ನು ಬ) ಡಾಕ್ಟರ್‌ರನ್ನು ಕ)ಇಂಜಿನಿಯರ್‌ರನ್ನು ಡ) ಚಾಲಕನನ್ನು

23. ಎಡದಿಂದ ಬಲಕ್ಕೆ ಬರೆಯುವ ಲಿಪಿಯನ್ನು ------- ಎಂದು ಕರೆಯಲಾಗಿದೆ.
ಅ) ಸಂಸ್ಕೃತ ಬ) ಸಿಂಹಳಿ ಕ) ಖರೋಷ್ಠೀ ಡ) ಗ್ರೀಕ್ ಲಿಪಿ

24. ಬೆಸಗರಹಳ್ಳಿ ರಾಮಣ್ಣನವರ ಗಾಂಧಿ ಕತೆಯಲ್ಲಿರುವ ನಿಂಗಮ್ಮ, ಪದ್ದಿ ಹಾಗು ಗಾಂಧಿಯ ಸಂಬಂಧವೇನು.
ಅ) ಅಕ್ಕ ಮತ್ತು ತಂಗಿ ಬ) ತಂಗಿ ಮತ್ತು ಗೆಳತಿ ಕ) ತಾಯಿ ಮತ್ತು ತಂಗಿ ಡ) ಸ್ನೇಹಿತರು.

25. ಸಂವಿಧಾನದ --------- ವಿಧಿಯು ದಿನನಿತ್ಯದ ವ್ಯವಹಾರದಲ್ಲಿ ಉಪಯೋಗಿಸುವ ಮತ್ತು ಕಾನೂನಾತ್ಮಕ ವಿಷಯಗಳಲ್ಲಿ ಬಳಸುವ ಭಾಷೆಯನ್ನು ಕುರಿತು ವಿವರಿಸುತ್ತದೆ.
ಅ) 370 ನೇ ವಿಧಿ ಬ) 333 ನೇ ವಿಧಿ ಕ) 343 ನೇ ವಿಧಿ ಡ) 371 ನೇ ವಿಧಿ

26. ಅಣ್ಣಪ್ಪನ ರೇಶ್ಮೆಕಾಯಿಲೆ ಪ್ರಬಂಧವು ಕುವೆಂಪುರವರ -------- ಗ್ರಂಥದಿಂದ ಆರಿಸಿಕೊಳ್ಳಲಾಗಿದೆ.

ಅ) ಮಲೆನಾಡಿನ ಚಿತ್ರಗಳು ಬ) ರಾಮಾಯಣ ದರ್ಶನಂ

ಕ) ನೆನಪಿನ ದೋಣಿಯಲ್ಲಿ ಡ) ಕಾನೂರು ಸುಬ್ಬಮ್ಮ ಹೆಗ್ಗಡತಿ

27. ಈ ತತ್ಸಮಗಳಿಗೆ ಹೊಂದಿಕೆಯಾಗುವ ತದ್ಭವಗಳನ್ನು ಗುರುತಿಸಿ

ಯತಿ, ಯಾತ್ರಾ, ವಿದ್ಯಾ, ನಿಯಮ.

ಅ) ಯಯಾತಿ, ಪ್ರವಾಸ, ವಿಜಯ, ನಿಯಮಿತ ಬ) ಜತಿ, ಜಾತ್ರೆ, ಬಿಜ್ಜೆ, ನೇಮ

ಕ) ಯಾರು, ಪ್ರಯಾಣ, ವಿವಿಧ ನೇಮ ಡ) ಯತಿಗಳು, ಜತೆ, ವಿನಯ, ಕಾನೂನು

28. ಭದ್ರಾ ನದಿಯ ಈ ಭಾಗದಲ್ಲಿ ಮೀನು ಹಿಡಿಯಲು --------- ಹಾಕುವ ವಾಡಿಕೆ ಇದೆ.

ಅ) ಕಿಳ್ಳೆ ಕ್ಯಾತರ ಬಲೆ ಬ) ಮೀನಿನ ಬುಟ್ಟಿ ಕ) ಕಟ್ಟುಗಾಳ ಡ) ಬೀಸುಬಲೆ

29. ಗಂಗೆಯ ತಡಿಯಲ್ಲಿರುವ ಹತ್ತಾರು ಸ್ನಾನಘಟ್ಟಗಳನ್ನು ವೀಕ್ಷಿಸಲು -------- ಸಂಚರಿಸುವುದು ಸೂಕ್ತವೆಂದು ಶಿವರಾಮ ಕಾರಂತರು ಅಭಿಪ್ರಾಯ ಪಟ್ಟಿದ್ದಾರೆ.

ಅ) ಕಾಲು ನೆಡಿಗೆ ಬ) ಬಸ್ಸಿನ ಪ್ರಯಾಣ ಕ) ವಾಯುಯಾನ ಡ) ದೋಣಿಯ ಪ್ರಯಾಣ

30. 'ದೊಡ್ಡಗೌಡರ ಮನೆಯ ಬಾಗಿಲಿಗೆ ನಮ್ಮ ಮೂಳೆಯ ತ್ವಾರಣ' ಇದು ಯಾವ ಲೇಖಕರ ಕವನದ ಸಾಲುಗಳು

ಅ) ಸಿದ್ದಲಿಂಗಯ್ಯನವರ ಕವನದ ಸಾಲುಗಳು

ಬ) ಸು. ರಂ. ಎಕ್ಕುಂಡಿನವರ ಕವನದ ಸಾಲುಗಳು

ಕ) ಸವಿತಾ ನಾಗಭೂಷಣರವರ ಕವನದ ಸಾಲುಗಳು

ಡ) ಕುವೆಂಪುರವರ ಕವನದ ಸಾಲುಗಳು

* * * * *